**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ರವರ ನ್ಯಾಯಾಲಯ, ಚಳ್ಳಕೆರೆ.**

**ಸಿ.ಸಿ. ನಂ. 1027/2022**

ಪ್ರಮಾಣ ವಚನ ಬೋಧಿಸಲಾಯಿತು.

| | | | |
|---|---|---|---|
| ಹೆಸರು | : | ಶಿವಣ್ಣ | ಸಿ.ಡಬ್ಲ್ಯೂ-03 |
| ತಂದೆ ಹೆಸರು | : | ಹನುಮಂತಪ್ಪ | ಪಿ.ಡಬ್ಲ್ಯೂ-03 |
| ವಯಸ್ಸು | : | 56 ವರ್ಷ | |
| ಉದ್ಯೋಗ | : | ಗುಮಾಸ್ತ ಕೆಲಸ | |
| ವಾಸಸ್ಥಳ | : | ಚಳ್ಳಕೆರೆ ಟೌನ್ | ದಿಃ 07-08-2025. |

**ಮುಖ್ಯ ವಿಚಾರಣೆ: ಮಾನ್ಯ ಎ.ಪಿ.ಪಿ. ರವರಿಂದಃ**

ಸಾಕ್ಷಿಗೆ ನಿಪಿ.2 ನ್ನು ತೋರಿಸಲಾಗಿ ದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿರುತ್ತಾರೆ. ಸಾಕ್ಷಿಯ ಸಹಿಯನ್ನು ನಿಪಿಃ 2(ಸಿ) ಅಂತ ಗುರುತಿಸಲಾಯಿತು. ಈಗ್ಗೆ 3 ವರ್ಷಗಳ ಹಿಂದೆ ಪಾವಗಡ ರಸ್ತೆಯ ಜಯಣ್ಣ ರವರ ಪೆಟ್ರೋಲ್ ಬಂಕ್ ನ ಸ್ವಲ್ಪ ಮುಂದುಗಡೆ ನಿಪಿ.2 ಕ್ಕೆ ಸಹಿ ಮಾಡಿರುತ್ತೇನೆ. ಪೊಲೀಸರು ಸ್ಥಳಕ್ಕೆ ಬಂದು 1 ನೇ ಆರೋಪಿಯು ಬಿಲ್ಡಿಂಗ್ ಹೊಡೆದ ವಿಚಾರವಾಗಿ ನನ್ನ ಸಹಿ ಪಡೆದಿರುತ್ತಾರೆ. ಆ ಸಮಯದಲ್ಲಿ ನಾನು, ಚಾಸಾ-1 ಮತ್ತು ಚಾಸಾ-2 ರವರು ಹಾಜರಿದ್ದೆವು. ಮದ್ಯಾಹ್ನ 02.30 ರಿಂದ 03-30 ಗಂಟೆ ಸಮಯದಲ್ಲಿ ನಿಪಿ.2 ಕ್ಕೆ ಸಹಿ ಮಾಡಿರುತ್ತೇನೆ. ಪೊಲೀಸರು ನನ್ನ ಸಮಕ್ಷಮ ಯಾವುದೇ ಕ್ರಮ ಜರುಗಿಸಿರುವುದಿಲ್ಲ.

**( ಈ ಹಂತದಲ್ಲಿ ಸಹಾಯಕ ಸರ್ಕಾರಿ ಅಭಿಯೋಜಕರು ಸದರಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲಿಗಾಗಿ ಅನುಮತಿ ಕೋರಿರುತ್ತಾರೆ, ಸಾಕ್ಷಿಯ ಹೇಳಿಕೆ ಹಾಗೂ ದಾಖಲೆಗಳನ್ನು ಪರಿಶೀಲಿಸಿ ಅನುಮತಿ ನೀಡಲಾಯಿತು)**

**ಪಾಟೀ ಸವಾಲು ಮಾನ್ಯ ಎ.ಪಿ.ಪಿ. ರವರಿಂದಃ**

ದಿನಾಂಕ 23.02.2021 ರಂದು ಚಾಸಾ-1 ರವರು ಬೀರು ಅಂಗಡಿಗೆ ಹೋಗುವಾಗ ವರ್ಕ್ ಶಾಪ್ ಕ್ರಾಸ್ ನ ಬಳಿ ಚರಂಡಿ ಸ್ಲಾಬ್ ನ ಮೇಲೆ ಗಲಾಟೆ ಯಾದ ಸ್ಥಳದಲ್ಲಿ ಮದ್ಯಾಹ್ನ 03-00 ರಿಂದ 04.00 ಗಂಟೆ ಸಮಯದಲ್ಲಿ ಪೊಲೀಸರು ಮಹಜರ್ ಕ್ರಮ ಜರುಗಿಸಿರುತ್ತಾರೆ ಎಂದರೆ ಸರಿ. ಚಾಸಾ-1 ರವರು ಸ್ಥಳದಲ್ಲಿ ಹಾಜರಿದ್ದು ಸ್ಥಳ ತೋರಿಸಿದ ಮೆರೇಗೆ ಅವರ ಸಮಕ್ಷಮದಲ್ಲಿ ಮಹಜರ್ ಕ್ರಮ ಜರುಗಿಸಲಾಗಿರುತ್ತದೆ ಎಂದರೆ ಸರಿ. ಚಾಸಾ-1 ರವರು ಮಹಜರ್ ಸಮಯದಲ್ಲಿ ಸೀಮೆಂಟ್ ಗೋಡೆ ಹೊಡೆದಿದ್ದರಿಂದ 2 ಲಕ್ಷ ನಷ್ಟವಾಗಿದೆ ಎಂದು ಹೇಳಿದ್ದರು ಎಂದರೆ ಸರಿ. ಮಹಜರ್ ಸಮಯದಲ್ಲಿ ಪೊಲೀಸರು ಸೀಮೆಂಟ್ ಇಟ್ಟಿಗೆಯ ತುಂಡನ್ನು ಜಪ್ತು

ಪಡಿಸಿಕೊಂಡಿರುತ್ತಾರೆ ಎಂದರೆ ಸರಿ. ಸಾಕ್ಷಿಯು ನ್ಯಾಯಾಲಯದ ಮಂದೆ ಇರುವ ಮು.ಮಾ1 ಅನ್ನು ಪೊಲೀಸರು ಮಹಜರ್ ಸಮಯದಲ್ಲಿ ಜಪ್ತು ಪಡಿಸಿಕೊಂಡಿದ್ದರು ಎಂದರೆ ಸರಿ.

**ಪಾಟೀ ಸವಾಲುಃ ಶ್ರೀ ಆರ್ ಎಸ್ ಎಂ ಆರೋಪಿ ಪರ ವಕೀಲರಿಂದಃ**

ನಾನು ಚಾಸಾ–1 ರವರ ಅಂಗಡಿಯಲ್ಲಿ ಗುಮಾಸ್ತನಾಗಿ ಕೆಲಸ ಮಾಡುತ್ತೇನೆ ಎಂದರೆ ಸರಿ. ಬಿಲ್ಡಿಂಗ್ ಹೊಡೆದ ವಿಚಾರವಾಗಿ ನನ್ನ ಸಹಿ ಪಡೆದಿರುತ್ತಾರೆ ಎಂದು ಹೇಳಿರುವುದು ಸುಳ್ಳು ಎಂದರೆ ಸರಿಯಲ್ಲ. ನಿಪಿ.2 ಕ್ಕೆ ಸಹಿ ಮಾಡಿದ ದಿನಾಂಕ, ತಿಂಗಳು ಮತ್ತು ವರ್ಷ ಹೇಳಲು ಆಗುವುದಿಲ್ಲ. ನಿಪಿ.2 ರಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತಿಲ್ಲ ಎಂದರೆ ಸರಿಯಲ್ಲ. ಪಂಚನಾಮೆ ಮಾಡಿದ ಸಳದ ಚಕ್ಕುಬಂದಿ ಹೇಳಲು ಆಗುವುದಿಲ್ಲ. ಮಹಜರ್ ಸಮಯದಲ್ಲಿ ನನ್ನ ಜೊತೆ ಚಾಸಾ–1 ಮತ್ತು 2 ರವರು ಹಾಜರಿರಲಿಲ್ಲ ಹಾಗೂ ನಿಪಿ.2 ಕ್ಕೆ ಸಹಿ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಚಾಸಾ–1 ರವರು ಸ್ಥಳವನ್ನು ತೋರಿಸಿರುತ್ತಾರೆ ಎಂದು ಹೇಳುವುದು ಸುಳ್ಳು ಎಂದರೆ ಸರಿಯಲ್ಲ. ಗೋಡೆ ಬೀಳಿಸಿದ್ದರಿಂದ 2 ಲಕ್ಷ ನಷ್ಟ ಉಂಟಾಗಿರುತ್ತದೆ ಎಂದು ಹೇಳುವುದು ಸುಳ್ಳು ಎಂದರೆ ಸರಿಯಲ್ಲ. ಪೊಲೀಸರು ಸ್ಥಳದಲ್ಲಿ ಸೀಮೆಂಟ್ ಇಟ್ಟಿಗೆಯನ್ನು ಜಪ್ತು ಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ. ಚಾಸಾ–1 ರವರ ಕೈಕೆಳಗೆ ನಾನು ಕೆಲಸ ಮಾಡುವುದರಿಂದ ಅವರಿಗೆ ಅನುಕೂಲವಾಗಲೀ ಎಂಬ ಉದ್ದೇಶದಿಂದ ಚಾಸಾ–1 ರವರು ನೀಡಿರುವ ಸುಳ್ಳು ಪ್ರಕರಣಕ್ಕೆ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೇ.ಸರಿಯಿದೆ,

ಪ್ರಧಾನ ಸಿವಿಲ್ ಮತ್ತು ಜೆ.ಎಂ.ಎಫ್.ಸಿ.,
ನ್ಯಾಯಾಧೀಶರು, ಚಳ್ಳಕೆರೆ